ಸಿ.ಸಿ ಸಂಖ್ಯೆಃ 25/2021

ಡಿಡಬ್ಲ್ಯೂ: 01

ದಿನಾಂಕಃ 04-08-2025

ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

<u>ಪಾಟೀ ಸವಾಲುಃ ಪಿರ್ಯಾಧಿದಾರರ ಪರ ಶ್ರೀಮತಿ ಡಿ ಬಿ ಸಿ ವಕೀಲರಿಂದಃ</u>

ಸಾಕ್ಷಿಗೆ ನಿಪಿ- 1 ನ್ನು ತೋರಿಸಿದ್ದು ಸದರಿ ಚೆಕ್ಕ ನಿಮ್ಮದು ಎಂದರೆ ಸರಿ. ಸದರಿ ಚೆಕ್ಕು ಯಾರದು ಇರುತ್ತದೆಯೋ ಅವರೇ ಸಹಿ ಮಾಡಬೇಕು ಎಂದರೆ ಸರಿ. ಮುಂದುವರೆದು ಸದರಿ ಸಹಿಯನ್ನು ನಾನು ಮಾಡಿರುವುದಿಲ್ಲ. ಸಾಮಾನ್ಯವಾಗಿ ಬ್ಯಾಂಕನವರು ಚೆಕ್ಕನ್ನು ನಗದೀಕರಣಕ್ಕೆ ಹಾಕಿದಾಗ ಅದರ ಸಂಖ್ಯೆ ಮತ್ತು ಸಹಿಯನ್ನು ನೋಡಿ ಮುಂದುವರೆಯುತ್ತಾರೆ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ.

ಸಾಕ್ಷಿಗೆ ತನ್ನ ಪರ ವಕೀಲರು ಸಲ್ಲಿಸಿದ ವಕಾಲತ್ತನ್ನು ತೋರಿಸಿ ಅದರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಗೆ ನಿಪಿ- 1 ರ ಸಹಿ ಮತ್ತು ವಕಾಲತ್ತನ ಸಹಿಯನ್ನು ತೋರಿಸಿ ಎರಡು ಒಂದೇ ಇರುತ್ತದೆ ಎಂದರೆ ವಕಾಲತ್ತಿನ ಸಹಿಯನ್ನು ಒಪ್ಪಿಕೊಂಡಿದ್ದು ನಿಪಿ- 1 ರ ಮೇಲಿರುವ ಸಹಿಯನ್ನು ನಕಲು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಚೆಕ್ಕನ ದಿನಾಂಕಃ 23-09-2019 ಇದ್ದು ಅದರ ಮೇಲಿರುವ ಸಹಿಯನ್ನು ನೀವು ಸಲ್ಲಿಸಿದ ವಕಾಲತ್ತನ್ನು ನೋಡಿ ನಕಲು ಮಾಡಿರುತ್ತಾರೆ ಎಂದು ನುಡಿಯುತ್ತಿದ್ದೀರಿ ಎಂದರೆ ಸರಿ.

ನಿಪಿ- 1 ರ ಮೇಲಿರುವ ಸಹಿಯನ್ನು ಯಾರು ಮಾಡಿರುತ್ತಾರೆ ಎಂದರೆ ನನ್ನ ಬಳಿ ಕೆಲಸ ಮಾಡುತ್ತಿದ್ದ ಷಣ್ಮುಖಗೌಡ ಬಸಟ್ಟೆಪ್ಪ ಪಟ್ಟಣಶೆಟ್ಟಿ ರವರು ಸಹಿಯನ್ನು ಮಾಡಿರುತ್ತಾರೆ. ರಾಸಾಯನಿಕ ಪರೀಕ್ಷೆಗ ಕಳುಹಿಸಿದ ನಿಮ್ಮ ಮಾದರಿ ಸಹಿಗಳು ಮತ್ತು ಅಕ್ಷರಗಳನ್ನು ನೀವು ಎಲ್ಲಿ ಮಾಡಿರುತ್ತೀರಿ ಎಂದರೆ ನಮ್ಮ ವಕೀಲರ ಮುಂದೆ ಮಾಡಿರುತ್ತೇನೆ. ಸದರಿ ಸಹಿಯನ್ನು ಕೋರ್ಟ ಎದುರುಗಡೆ ಮಾಡಿರುತ್ತೀರಾ ಎಂದರೆ ನಮ್ಮ ವಕೀಲರ ಮುಂದೆ ಮಾಡಿರುತ್ತೇನೆ. ಅದೇ ರೀತಿ ನೋಟರಿ ವಕೀಲರ ಮುಂದೆ ಏನಾದರೂ ಮಾಡಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ತಾನು ಸಲ್ಲಿಸಿರುವ ಮಾದರಿ ಸಹಿಗಳನ್ನು ತೋರಿಸಿದ್ದು ಅವುಗಳು ಚಿಕ್ಕದು ಮತ್ತು ದೊಡ್ಡದು ಆಗಿ ವ್ಯತ್ಯಾಸಗಳು ಕಂಡು ಬರುತ್ತಿವೆ ಎಂದರೆ ಸರಿ. ಸಾಕ್ಷಿಗೆ ತಾನು ಸಲ್ಲಿಸಿರುವ ಮಾದರಿ ದಿನಾಂಕಗಳನ್ನು ತೋರಿಸಿದ್ದು ಅವುಗಳು ಚಿಕ್ಕದು ಮತ್ತು ದೊಡ್ಡದು ಆಗಿ ವ್ಯತ್ಯಾಸಗಳು ಕಂಡು ಬರುತ್ತಿವೆ ಎಂದರೆ ಸರಿಯಲ್ಲ. ನೀವು ಹಣವನ್ನು ಕೊಡಬೇಕಾಗುತ್ತದೆ ಎಂಬ

ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಫಿರ್ಯಾಧಿಗೆ ಮೋಸ ಮಾಡುವ ಉದ್ದೇಶದಿಂದ ಹಣವನ್ನು ನೀಡಬೇಕಾಗುತ್ತದೆ ಎಂಬ ಉದ್ದೇಶದಿಂದ ಚೆಕ್ಕಗೆ ದಿನಾಂಕವನ್ನು ಬರೆದು, ಸಹಿಯನ್ನು ಮಾಡಿದ್ದರು ಸಹ ಇಲ್ಲ ಎಂದು ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸವಣೂರು.